http://www.howtoexam.com

# BEd MC 06/07 (02)

## B.Ed. Degree Examination, October 2009
## (D.E. Revised Scheme)
## C.C.M. OF TEACHING KANNADA

### ಕನ್ನಡ ವಿಷಯಾಧಾರಿತ ಬೋಧನಾ ವಿಧಾನಶಾಸ್ತ್ರ

Time : 3 Hours | Max. Marks : 100

*ಸೂಚನೆಗಳು : 1) ಎಲ್ಲಾ ವಿಭಾಗಗಳೂ **ಕಡ್ಡಾಯ**.*
*2) ಪ್ರಶ್ನೆಗಳಿಗೆ **ನೇರವಾಗಿ** ಉತ್ತರಿಸಿ.*

**ವಿಭಾಗ - ಎ**

ಈ ಕೆಳಗಿನ ಯಾವುದಾದರೂ **4** ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರ ತಲಾ **ಮೂರು** ಪುಟ ಮೀರದಂತಿರಲಿ. **(4×10=40)**

1. ಭಾಷಾ ಬೆಳವಣಿಗೆಯ ಹಂತಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸಿ. ಆ ಹಂತಗಳಲ್ಲಿ ಪರಿಗಣಿಸಬೇಕಾದ ಭಾಷಾ ಕಲಿಕೆಯ ತತ್ವಗಳನ್ನು ನಿರೂಪಿಸಿ.

2. ಭಾಷಾ ಬೋಧನೆಯ ಸಾಮಾನ್ಯ ಉದ್ದೇಶಗಳನ್ನು ವಿವರಿಸಿ. ಆ ಉದ್ದೇಶಗಳನ್ನು ಈಡೇರಿಸಲು ನೀವು ಹೇಗೆ ಬೋಧನೋದ್ದೇಶಗಳನ್ನು ರಚಿಸುವಿರೆಂಬುದನ್ನು ಉದಾಹರಣೆ ಸಹಿತ ತಿಳಿಸಿ.

3. ಕನ್ನಡ ಭಾಷಾ ಬೋಧನೆಯಲ್ಲಿ ಪಾಠ ಯೋಜನೆಯ ಅಗತ್ಯವನ್ನು ಸಮರ್ಥಿಸಿ. ಅದರಲ್ಲಿ ಪಾಲಿಸಬೇಕಾದ ಹಂತಗಳನ್ನು ಮತ್ತು ವಿಭಾಗಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

4. ಪರಿಣಾಮಕಾರಿ ಮಾತುಗಾರಿಕೆಯ ಲಕ್ಷಣಗಳೇನು ? ಪ್ರೌಢಶಾಲಾ ವಿದ್ಯಾರ್ಥಿಗಳ ಮಾತುಗಾರಿಕೆಯ ಗುಣಮಟ್ಟ ಸುಧಾರಿಸಲು ಯಾವುದಾದರೂ ನಾಲ್ಕು ಚಟುವಟಿಕೆಗಳನ್ನು ಬಳಸುವ ಬಗೆ ತಿಳಿಸಿ.

5. ಈ ಕೆಳಗಿನ ದೃಷ್ಟಿಗಳಿಂದ ಗದ್ಯ ಪದ್ಯಗಳ ನಡುವಣ ವ್ಯತ್ಯಾಸವನ್ನು ಸ್ಪಷ್ಟಪಡಿಸಿ.
   – ಸಾಹಿತ್ಯ ಸ್ವರೂಪ
   – ಬೋಧನಾ ಉದ್ದೇಶ
   – ಬೋಧನಾ ವಿಧಾನ

6. ಕನ್ನಡ ವ್ಯಾಕರಣ ಬೋಧನೆಗೆ ಅನುಕೂಲಕರವಾದ ಯಾವುದಾದರೂ ಎರಡು ವಿಧಾನಗಳ ಬಳಕೆಯನ್ನು ಸೋದಾಹರಣವಾಗಿ ವಿವರಿಸಿ.

P.T.O.

Placement paper, University exam paper, entrance exam and school question paper

http://www.howtoexam.com



## ವಿಭಾಗ – ಬಿ

7. ಈ ಕೆಳಗಿನ ಯಾವುದಾದರೂ **ಆರು** ಪ್ರಶ್ನೆಗಳಿಗೆ ಉತ್ತರಿಸಿ. ನಿಮ್ಮ ಉತ್ತರ ತಲಾ **ಒಂದು** ಪುಟ ಮೀರದಂತಿರಲಿ. **(5×6=30)**

ಅ) ಕನ್ನಡ ಭಾಷೆಯ ರಚನೆ ಮತ್ತು ಸ್ವರೂಪವೇನು ?

ಆ) ಭಾಷಾ ಬೋಧನೆಯ ಸಿದ್ಧತೆಯಲ್ಲಿ ವಸ್ತು ವಿಶ್ಲೇಷಣೆಯ ವಿವಿಧ ಕ್ರಮಗಳ ಪರಿಚಯ ನೀಡಿ.

ಇ) ಭಾಷಾ ಕಲಿಕೆಯಲ್ಲಿ ಶ್ರವಣಗಾರಿಕೆಯ ಮಹತ್ವವನ್ನು ವಿವರಿಸಿ.

ಈ) ನಾಟಕ ಬೋಧನೆಯ ಕ್ರಮವನ್ನು ಸೋದಾಹರಣವಾಗಿ ತಿಳಿಸಿ.

ಉ) ಯಾವುದಾದರೂ ನಾಲ್ಕು ಭಾಷಾ ಆಟಗಳನ್ನು ಸಂಕ್ಷಿಪ್ತವಾಗಿ ತಿಳಿಸಿ, ಬಳಸುವ ಕ್ರಮ ವಿವರಿಸಿ.

ಊ) ಘಟಕ ಪರೀಕ್ಷೆಯಲ್ಲಿ ನೀಲಿ ನಕ್ಷೆಯನ್ನು ಹೇಗೆ ರಚಿಸುವಿರಿ ?

ಋ) ಕನ್ನಡ ಪಠ್ಯ ಪುಸ್ತಕಗಳ ರಚನೆಯ ತತ್ವಗಳಾವುವು ?

ೠ) ಕನ್ನಡ ಸಾಹಿತ್ಯಾಭಿರುಚಿ ಬೆಳೆಸುವಲ್ಲಿ ಸಾಹಿತ್ಯ ಸಂಘದ ಪಾತ್ರವೇನು ?

## ವಿಭಾಗ – ಸಿ

8. ಈ ಕೆಳಗಿನ ಯಾವುದಾದರೂ **ಆರು** ಪ್ರಶ್ನೆಗಳಿಗೆ ತಲಾ **ಒಂದು** ಪುಟಕ್ಕೆ ಮೀರದಂತೆ ಉತ್ತರಿಸಿ. **(5×6=30)**

ಅ) ಕನ್ನಡ ಭಾಷೆಯ ವಿಶಿಷ್ಟ ಲಕ್ಷಣಗಳನ್ನು ಉದಾಹರಣೆಯೊಂದಿಗೆ ತಿಳಿಸಿ.

ಆ) "ಯುದ್ಧ ಕಾಲೇ ಶಸ್ತ್ರಾಭ್ಯಾಸ" ಅಥವಾ 'ಎಲ್ಲರ ಮನೆಯ ದೋಸೆಯೂ ತೂತು' ಗಾದೆಯ ವಿಸ್ತರಣೆಗೆ ವಿದ್ಯಾರ್ಥಿಗಳಿಗೆ ಹೇಗೆ ನೆರವಾಗುವಿರಿ ?

ಇ) "ಕಮಲದಂತಹ ಮುಖ ಮತ್ತು ಕಮಲ ಮುಖಿ" ಇವುಗಳಲ್ಲಿರುವ ಅರ್ಥಾಲಂಕಾರದ ವ್ಯತ್ಯಾಸವನ್ನು ಹೇಗೆ ಬೋಧಿಸುವಿರಿ ?

ಈ) ಅಭಿವಂದನೆ ಮತ್ತು ಅಭಿನಂದನೆ, ಕೃತಜ್ಞ ಮತ್ತು ಕೃತಘ್ನ ಈ ಪದಗಳ ಅರ್ಥ ವ್ಯತ್ಯಾಸ ಅನುಸರಿಸಿ ವಾಕ್ಯ ರಚಿಸಲು ಹೇಗೆ ಮಾರ್ಗದರ್ಶಿಸುವಿರಿ ?

ಉ) ಅಲ್ಪ ವಿರಾಮ ಮತ್ತು ಅರ್ಧ ವಿರಾಮ ಲೇಖನ ಚಿಹ್ನೆಗಳ ಬಳಕೆಯ ಸಕ್ರಮವನ್ನು ಹೇಗೆ ಮನದಟ್ಟು ಮಾಡುವಿರಿ ?

ಊ) ಬೇಗ ಬೇಗ ಮತ್ತು ಸರಸರನೆ ಈ ಎರಡರ ವ್ಯಾಕರಣಾಂಶ ಹೇಗೆ ಸ್ಪಷ್ಟಪಡಿಸುವಿರಿ ?

ಋ) ವಿದ್ಯಾರ್ಥಿಗಳಿಗೆ ಕಂದ ಪದ್ಯದ ಛಂದಸ್ಸನ್ನು ಹೇಗೆ ಬೋಧಿಸುವಿರಿ ?

ೠ) ಈ ಕೆಳಗಿನ ಪದ್ಯದ ಛಂದಸ್ಸನ್ನು ಹೇಗೆ ಬೋಧಿಸುವಿರಿ ?

ಕಡೆಗೆ ಕರುಣಾಳು ರಾಘವನಲ್ಲಿ ತಪ್ಪಿಲ್ಲ
ಕಡು ಪಾತಕಂಗೈದು ಪೆಣ್ಣಾಗಿ ಸಂಭವಿಸಿ
ದೊಡಲಂ ಪೊರೆವುದೆನ್ನೊಳಪರಾಧಮುಂಟು ಸಾಕಿಲ್ಲಿರಲ್ಬೇಡ ನೀನು

---

Placement paper, University exam paper, entrance exam and school question paper